ಜೆಎಸ್‌ಎಸ್ ಮಹಾವಿದ್ಯಾಪೀಠ
# ಜೆಎಸ್‌ಎಸ್ ಮಹಿಳಾ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ $B^+$ (CGPA: 2.74) ಮಾನ್ಯತೆ ಪಡೆದಿದೆ
**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

## ಇಂಟರ್ನ್‌ಶಿಪ್ ವಿಶೇಷ ಉಪನ್ಯಾಸ

ಕೊಳ್ಳೇಗಾಲ: 13.10.2025 ಇಂಟರ್ನ್‌ಶಿಪ್ ಎಂದರೆ ವ್ಯಾಸಂಗದ ನಡುವೆ ರಜಾ ಅವಧಿಯಲ್ಲಿ ತಾತ್ಕಾಲಿಕವಾಗಿ ಪ್ರಾಯೋಗಿಕ ತರಬೇತಿ ಪಡೆಯುವುದಾಗಿದೆ. ಈಗ ಕಂಪನಿಗಳು ಪದವಿ/ಡಿಪ್ಲೊಮಾ ಮುಗಿಸಿದ ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಸಜ್ಜುಗೊಳಿಸುವ ನಿಟ್ಟಿನಲ್ಲಿ ಇಂಟರ್ನ್‌ಶಿಪ್ ಆಗಿ ನೇಮಕ ಮಾಡಿಕೊಳ್ಳುತ್ತಿವೆ. ಇಂಟರ್ನ್‌ಶಿಪ್ ಅಥವಾ ತರಬೇತಿ ಅವಧಿಯಲ್ಲಿ ಪ್ರಸ್ತುತವಾದ ಕೌಶಲಗಳನ್ನು ಅನುಭವದ ಮೂಲಕ ಪಡೆದುಕೊಳ್ಳುವುದೇ ಇದರ ಉದ್ದೇಶ ಎಂದು ಶ್ರೀ ಅಂಕುಶ, ಸೈಬರ್ ಸೆಕ್ಯೂರಿಟಿ ವಿಷಯ ಪರಿಣಿತ'ರು, ರ‍್ಯಾಂಕ್ ಬುಕ್ ಲರ್ನಿಂಗ್ & ಸಾಫ್ಟ್‌ವೇರ್ ಸೊಲ್ಯೂಶನ್, ಮೈಸೂರು ರವರು ತಿಳಿಸಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯ ಹಾಗೂ ವ್ಯವಹಾರ ನಿರ್ವಹಣಾ ವಿಭಾಗಗಳ ವತಿಯಿಂದ ಆಯೋಜಿಸಿದ್ದ "ಇಂಟರ್ನ್‌ಶಿಪ್ ವಿಶೇಷ ಉಪನ್ಯಾಸ" ಕಾರ್ಯಕ್ರಮದಲ್ಲಿ ಮಾತನಾಡಿದರು.

ಶ್ರೀ ಗೌತಮ್, ಡಿಜಿಟಲ್ ಮಾರ್ಕೆಟಿಂಗ್ ವ್ಯವಸ್ಥಾಪಕರು, ರ‍್ಯಾಂಕ್ ಬುಕ್ ಲರ್ನಿಂಗ್ & ಸಾಫ್ಟ್‌ವೇರ್ ಸೊಲ್ಯೂಶನ್, ಮೈಸೂರು ರವರು ಮಾತನಾಡಿ ವೃತ್ತಿಪರ ಸಂಪರ್ಕಗಳನ್ನು ಬೆಳೆಸಲು ಮತ್ತು ಭವಿಷ್ಯದ ಉದ್ಯೋಗಾವಕಾಶಗಳಿಗೆ ದಾರಿ ಮಾಡಿಕೊಡುತ್ತದೆ. ಕೆಲಸದ ಅನುಭವದ ಮೂಲಕ ವೃತ್ತಿಪರ ಕೌಶಲ್ಯಗಳನ್ನು ಕಲಿಯಲು ಇದು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ.ಹೆಚ್ ಎಸ್ ಕೊಂಗಳಪ್ಪರವರು ವಹಿಸಿದ್ದರು. ವೇದಿಕೆಯಲ್ಲಿ ಐಕ್ಯೂಎಸಿ ಸಂಚಾಲಕರು ಹಾಗೂ ವಾಣಿಜ್ಯ ಹಾಗೂ ವ್ಯವಹಾರ ನಿರ್ವಹಣಾ ವಿಭಾಗಗಳ ಮುಖ್ಯಸ್ಥರಾದ ಶ್ರೀಮತಿ ಮಮತ ಎಸ್ ಉಪಸ್ಥಿತರಿದ್ದರು.

ಶ್ರೀ ಅಂಕುಶ, ಸೈಬರ್ ಸೆಕ್ಯೂರಿಟಿ ವಿಷಯ ಪರಿಣಿತ'ರು, ರ‍್ಯಾಂಕ್ ಬುಕ್ ಲರ್ನಿಂಗ್ & ಸಾಫ್ಟ್‌ವೇರ್ ಸೊಲ್ಯೂಶನ್, ಮೈಸೂರು ಇಂಟರ್ನ್‌ಶಿಪ್ ಕುರಿತು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಮಮತ ಎಸ್, ಪ್ರಾರ್ಚಾರಾದ ಡಾ.ಹೆಚ್ ಎಸ್ ಕೊಂಗಳಪ್ಪರವರು ಹಾಗೂ ಶ್ರೀ ಗೌತಮ್, ಡಿಜಿಟಲ್ ಮಾರ್ಕೆಟಿಂಗ್ ವ್ಯವಸ್ಥಾಪಕರು, ರ‍್ಯಾಂಕ್ ಬುಕ್ ಲರ್ನಿಂಗ್ & ಸಾಫ್ಟ್‌ವೇರ್ ಸೊಲ್ಯೂಶನ್, ಮೈಸೂರು ರವರು



ಕಾರ್ಯಕ್ರಮದಲ್ಲಿ ಭಾಗವಹಿಸಿರುವ ವಿದ್ಯಾರ್ಥಿನಿಯರು

